# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ: 162 (ಹೊಸ ಸಂಖ್ಯೆ: 214) ಗಿರಿನಗರ, ಬೆಂಗಳೂರು.

### ಸೆಪ್ಟಂಬರ್ 2022 : ವಾರ್ಡ್ ಸಮಿತಿಯ 1ನೇ ಸಭೆಯ ನಡವಳಿಗಳು

***********

ಉಲ್ಲೇಖ : ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)/ಪಿಆರ್/35/2020–21, ದಿನಾಂಕ: 22–09–2021.

******

ದಿನಾಂಕ : 03–09–2022

ಸ್ಥಳ : ವಾರ್ಡ್ ಕಛೇರಿ, ಸ್ವಾಮಿ ವಿವೇಕಾನಂದ ಉದ್ಯಾನವನ, ಗಿರಿನಗರ

ಸಮಯ : ಪೂರ್ವಾಹ್ನ 11.00 ಗಂಟೆಗೆ

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳ ವಿವರ

| ಕ್ರ.ಸಂ | ಹೆಸರು | ಪದನಾಮ |
|---|---|---|
| 1 | ಶ್ರೀ ಸುನಿಲ್‌ಕುಮಾರ್.ಪಿ | ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು |
| 2 | ಶ್ರೀ ರಮೇಶ್ .ಎಂ | ಸಹಾಯಕ ಅಭಿಯಂತರರು, ಕಾರ್ಯದರ್ಶಿ ಮತ್ತು ಸಂಚಾಲಕರು ವಾರ್ಡ್–162, ಗಿರಿನಗರ |
| 3 | ಶ್ರೀ ಧವಲೇಶ್ | ಸಹಾಯಕ ಅಭಿಯಂತರರು (ಬೆಸ್ಕಾಂ) |
| 4 | ಶ್ರೀ ರವಿಕುಮಾರ್ .ಎಸ್ | ಕಿರಿಯ ಆರೋಗ್ಯ ಪರಿವೀಕ್ಷಕರು (ಗಿರಿನಗರ ವಾರ್ಡ್) |
| 5 | ಶ್ರೀ ಪ್ರವೀಣ್ ಬಿ.ಎಸ್ | ಸಹಾಯಕ ಅಭಿಯಂತರರು (ರಸ್ತೆ ಮತ್ತು ಮೂಲಭೂತ ಸೌಕರ್ಯ) ,ಬಿಬಿಎಂಪಿ. |
| 6 | ಶ್ರೀಮತಿ ಉಷಾ ಸಿ.ಆರ್ | ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 7 | ಶ್ರೀಮತಿ ಕುಮುದ | ಕಿರಿಯ ಅಭಿಯಂತರರು (ಬಿ.ಡಬ್ಲ್ಯೂ.ಎಸ್.ಎಸ್.ಬಿ) |
| 7 | ಶ್ರೀ ವಸಂತ್‌ಕುಮಾರ್.ಕೆ.ಆರ್ | ಕಂದಾಯ ವಸೂಲಿಗಾರರು, ವಾರ್ಡ್–162 |
| 8 | ಶ್ರೀ ಅಭಿಷೇಕ್ | ಬೀದಿ ದೀಪ ನಿರ್ವಾಹಕರು |
| 9 | ಶ್ರೀ ಚಂದವಳ್ಳಿ | ಮಾರ್ಷಲ್ |
| 10 | ಶ್ರೀ ಸ್ವಾಮಿದಾಸ್ | ಸಂಚಾರ ಪೋಲೀಸ್ ಠಾಣೆ |
| 11 | ಶ್ರೀಮತಿ ನೇತ್ರಾವತಿ | ಗಿರಿನಗರ ಪೋಲೀಸ್ ಠಾಣೆ |
| 12 | ಶ್ರೀಯುತರಾದ ಪ್ರಸಾದ್, ಅಜಿತ್‌ಕುಮಾರ ಪ್ರಜ್ವಲ್, ಸತೀಶ್, ಉಮಾಶಂಕರ್ | ಸಭೆಗೆ ಹಾಜರಿದ್ದ ಸಾರ್ವಜನಿಕರು. |

ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಯವರ ಅನುಮತಿಯೊಂದಿಗೆ ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು ಹಾಜರಿದ್ದ ಸದಸ್ಯರೆಲ್ಲರಿಗೂ ಸ್ವಾಗತ ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು. ಹಿಂದಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು ಹಾಗೂ ಕೈಗೊಂಡ ಕ್ರಮಗಳ ಬಗ್ಗೆ ಸಭೆಯಲ್ಲಿ ವಾರ್ಡ್ ಅಭಿಯಂತರರು ವರದಿಯನ್ನು ಓದಿ ತಿಳಿಸಿದರು.

....2,

1. ಶ್ರೀವಿದ್ಯಾನಗರದ ಬಸ್ ನಿಲ್ದಾಣದ ಹಿಂಭಾಗದಲ್ಲಿ ಆಟೋ ಟಿಪ್ಪರ್‌ಗಳಿಂದ ಕಾಂಪ್ಯಾಕ್ಟರ್‌ಗೆ ಹಸಿಕಸ ತುಂಬಲು ಕಲ್ಪಿಸಿರುವ ವ್ಯವಸ್ಥೆಯಿಂದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಚರ್ಚಿಸಲಾಯಿತು.

ಸ್ಥಳ ಪರಿವೀಕ್ಷಣಾ ಸಮಯದಲ್ಲಿ ಈ ಕೆಳಕಂಡ ನ್ಯೂನತೆಗಳು ಕಂಡುಬಂದಿದ್ದು ಕೂಡಲೇ ಸರಿಪಡಿಸಲು ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

- ಹಸಿ ಕಸ ತುಂಬಿರುವ ಆಟೋ ಟಿಪ್ಪರ್‌ಗಳು ಮನೆಗಳ ಮುಂದೆ ನಿಲುಗಡೆ ಮಾಡದಂತೆ ನಿಗಾವಹಿಸುವುದು.
- ಘನತ್ಯಾಜ್ಯ ನಿರ್ವಹಣೆ ಮಾಡುವ ಕಾರ್ಮಿಕರ ದ್ವಿಚಕ್ರ ವಾಹನಗಳನ್ನು ಸುತ್ತಮುತ್ತಲಿನ ವಾಸದ ಮನೆಗಳ ಮುಂದೆ ನಿಲುಗಡೆ ಮಾಡದಂತೆ ನಿಗಾವಹಿಸುವುದು.
- ಕಾಂಪ್ಯಾಕ್ಟರ್‌ನಿಂದ ಲೀಚೆಟ್ ಸೋರುತ್ತಿದ್ದು, ಲೀಚೆಟ್ ಸೋರದಂತೆ ಟ್ಯಾಂಕ್ ದುರಸ್ಥಿಪಡಿಸುವುದು.
- ಪ್ರತಿ ದಿನ ತ್ಯಾಜ್ಯವನ್ನು ಕಾಂಪ್ಯಾಕ್ಟರ್‌ನಿಂದ ಸಾಗಿಸಿದ ನಂತರ ಸದರಿ ಸ್ಥಳವನ್ನು ಸ್ವಚ್ಛಗೊಳಿಸುವುದು.

2. ಶ್ರೀವಿದ್ಯಾನಗರದ ಬಸ್ ನಿಲ್ದಾಣದ ಹಿಂಭಾಗದಲ್ಲಿ ಆಟೋ ಟಿಪ್ಪರ್‌ಗಳಿಂದ ಕಾಂಪ್ಯಾಕ್ಟರ್‌ಗೆ ಹಸಿಕಸ ತುಂಬಲು ಕಲ್ಪಿಸಿರುವ ಸ್ಥಳದಲ್ಲಿ ನೀರು ನಿಲ್ಲದಂತೆ ಕ್ರಮವಹಿಸಲು ವಾರ್ಡ್ ಅಭಿಯಂತರರಿಗೆ ಸಭೆಯಲ್ಲಿ ಅಧ್ಯಕ್ಷರು ಸೂಚಿಸಿದರು.

3. ಘನತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದಂತೆ, 10 ಪೌರಕಾರ್ಮಿಕರು ನಿವೃತ್ತಿ ಹೊಂದಿದ್ದು, 02 ಪೌರಕಾರ್ಮಿಕರು ಮರಣ ಹೊಂದಿರುವ ಕಾರಣ ಘನತ್ಯಾಜ್ಯ ನಿರ್ವಹಣೆ ಸಮರ್ಪಕವಾಗಿ ನಿರ್ವಹಿಸಲು ಕಷ್ಟಕರವಾಗಿರುತ್ತದೆ ಎಂದು ಸಭೆಗೆ ತಿಳಿಸಲಾಯಿತು. ಆದುದರಿಂದ, ತುರ್ತಾಗಿ ವಾರ್ಡಿಗೆ ಅವಶ್ಯಕವಿರುವ ಪೌರಕಾರ್ಮಿಕರನ್ನು ನಿಯೋಜಿಸಲು ಕೋರಿ ಕೇಂದ್ರ ಕಛೇರಿಗೆ ಪತ್ರ ಬರೆಯುವಂತೆ ಘನತ್ಯಾಜ್ಯ ನಿರ್ವಹಣೆ ಅಧಿಕಾರಿಗಳಿಗೆ ಅಧ್ಯಕ್ಷರು ಸೂಚಿಸಿದರು.

4. ವಾರ್ಡ್ ವ್ಯಾಪ್ತಿಯಲ್ಲಿ ಸಿಸಿ ಕ್ಯಾಮೆರಾ ಅಳವಡಿಸುವ ಸ್ಥಳಗಳನ್ನು ಪೋಲೀಸ್ ಇಲಾಖೆಯಿಂದ ಗುರುತಿಸಿದ್ದು, ಸದರಿ ಪಟ್ಟಿಯನ್ನು ವಾರ್ಡ್ ಸಮಿತಿಗೆ ಸಲ್ಲಿಸಲು ಸಭೆಯಲ್ಲಿ ಹಾಜರಿದ್ದ ಗಿರಿನಗರ ಪೋಲೀಸ್ ಠಾಣೆಯ ಸಿಬ್ಬಂದಿಗೆ ಅಧ್ಯಕ್ಷರು ಸೂಚಿಸಿದರು.

5. ಶ್ರೀವಿದ್ಯಾನಗರ 2ನೇ ಮುಖ್ಯರಸ್ತೆಯಲ್ಲಿ ಮತ್ತು 3ನೇ ಮುಖ್ಯರಸ್ತೆಯಲ್ಲಿ ಕಲ್ವರ್ಟ್ ಡಿ-ಸಿಲ್ಟ್ ಮಾಡಿ ಶ್ರೀವಿದ್ಯಾನಗರದ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತಿರುವ 3ನೇ ಮುಖ್ಯರಸ್ತೆಯ ಚರಂಡಿಯನ್ನು ದುರಸ್ಥಿಗೊಳಿಸಲು ಸಭೆಯಲ್ಲಿ ಹಾಜರಿದ್ದ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

6. ವಾರ್ಡ್ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 4ನೇ ಬ್ಲಾಕ್, 1ನೇ ಜಿ ಅಡ್ಡರಸ್ತೆಯಲ್ಲಿ ಮಳೆ ನೀರು ಸರಾಗವಾಗಿ ಹರಿಯಲು ಹೊಸದಾಗಿ ಕಲ್ವರ್ಟ್ ನಿರ್ಮಿಸಲು ಹಾಗೂ ಇದಕ್ಕೆ ಸಂಬಂಧ ಪಟ್ಟ Estimate ತಯಾರಿಸಿ ವಾರ್ಡ್ ಸಮಿತಿಗೆ ಮಂಡಿಸಲು ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

7. ವಾರ್ಡ್ ವ್ಯಾಪ್ತಿಯ ಬೀದಿ ದೀಪಗಳಿಗೆ ಅಡ್ಡಲಾಗಿರುವ ಮರದ ಕೊಂಬೆಗಳನ್ನು ಟ್ರಿಮ್ ಮಾಡಲು ಸಭೆಯಲ್ಲಿ ಹಾಜರಿದ್ದ ಬೀದಿ ದೀಪ ನಿರ್ವಾಹಕರಿಗೆ ಅಧ್ಯಕ್ಷರು ಸೂಚಿಸಿದರು.

....3

8. ವಾರ್ಡ್ ವ್ಯಾಪ್ತಿಯ 80 ಅಡಿ ಮುಖ್ಯರಸ್ತೆಯಲ್ಲಿ ಹೊಸಕೆರೆಹಳ್ಳಿ ಕ್ರಾಸ್ ಬಳಿಯಿರುವ ಕೆನರಾ ಬ್ಯಾಂಕ್ ಕಟ್ಟಡದ ಮುಂಭಾಗ ಅವೈಜ್ಞಾನಿಕವಾಗಿರುವ ರ್‍ಯಾಂಪ್ ಸರಿಪಡಿಸಲು ಸಭೆಯಲ್ಲಿ ಹಾಜರಿದ್ದ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದ ಸಹಾಯಕ ಅಭಿಯಂತರರಿಗೆ ಅಧ್ಯಕ್ಷರು ಸೂಚಿಸಿದರು.

9. ವಾರ್ಡ್ ವ್ಯಾಪ್ತಿಯ ಬಿ.ಎಸ್.ಕೆ 3ನೇ ಹಂತ, 7ನೇ ಬ್ಲಾಕ್, 2ನೇ ಮುಖ್ಯರಸ್ತೆಯಲ್ಲಿ (ಹೊಸಕೆರೆಹಳ್ಳಿ ಕ್ರಾಸ್ ರಸ್ತೆ) No Parking ಫಲಕವನ್ನುಅಳವಡಿಸಲು ಸಭೆಯಲ್ಲಿ ಹಾಜರಿದ್ದ ಬನಶಂಕರಿ ಸಂಚಾರಿ ಪೋಲೀಸ್ ಠಾಣೆ ಸಿಬ್ಬಂದಿಗೆ ಅಧ್ಯಕ್ಷರು ಸೂಚಿಸಿದರು.

"ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು'.

03/09/2022

ಕಾರ್ಯದರ್ಶಿಗಳು
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ: 162, ಗಿರಿನಗರ

ಅಧ್ಯಕ್ಷರು
ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ: 162, ಗಿರಿನಗರ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು, ಬೃ.ಬೆ.ಮ.ಪಾಲಿಕೆ, ಎನ್. ಆರ್. ವೃತ್ತ ರವರ ಮಾಹಿತಿಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ವಲಯ ಆಯುಕ್ತರು ( ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಮಾನ್ಯ ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಮಾಹಿತಿಗಾಗಿ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಮಾಹಿತಿಗಾಗಿ ಸಲ್ಲಿಸಿದೆ.
6. ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮಾಹಿತಿಗಾಗಿ ಕಳುಹಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಸವನಗುಡಿ ರವರ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ವಾರ್ಡ್ ಸಮಿತಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
9. ಕಛೇರಿ ಪ್ರತಿ.